ಪಂಚಮ

ಸಂಪುಟ : 3 ಸಂಚಿಕೆ : 21 5, ಡಿಸೆಂಬರ್ 1979 ಪಾಕ್ಷಿಕ ಬೆಲೆ 20 ಪೈಸೆ

ದ. ಸಂ. ಸ. ಖಂಡನೆ

ಮರಾಠವಾಡ ವಿ. ವಿ. ಗೆ ಡಾ॥ ಅಂಬೇಡ್ಕರ್‌ರ ವರ ಹೆಸರಿನ ಪುನರ್ ನಾಮಕರಣಕ್ಕೆ ಸಂಬಂಧಿಸಿದಂತೆ ದಲಿತ ಪ್ಯಾಂಥರ್ಸ್ ನಡೆಸಿದ 'ಔರಂಗಬಾದ್ ಚಲೋ' ಚಳವಳಿಯನ್ನು ಹತ್ತಿಕ್ಕಲು ಪೋಲೀಸರು ಗೋಲೀಬಾರ್ ನಡೆಸಿ ನಾಲ್ವರು ದಲಿತರನ್ನು ಬಲಿತೆಗೆದುಕೊಂಡ ಕ್ರೂರಕೃತ್ಯವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ಖಂಡಿಸಿದೆ.

ತಾತಗುಣಿ ಕಾರ್ಮಿಕರ 'ಬೆಂಗಳೂರು ಚಲೋ'

ವರದಿ : ಜನಾರ್ಧನ

ಬೆಂಗಳೂರು ಜಿಲ್ಲೆ ದಕ್ಷಿಣ ತಾಲ್ಲೋಕು ಕನಕಪುರ ರಸ್ತೆಯಲ್ಲಿ ಸುಮಾರು 800 ಎಕರೆಯನ್ನೊಳಗೊಂಡ ಒಂದು ಎಸ್ಟೇಟ್ ಇದೆ. ಅದರ ಮಾಲೀಕರು ರವೀಂದ್ರನಾಥ ಟಾಗೋರರ ಮೊಮ್ಮಗಳು ಮಾಜಿ ಖ್ಯಾತ ಸಿನಿಮಾನಟಿಯಾದ ದೇವಿಕರಾಣಿ ಮತ್ತು ವಿಶ್ವಖ್ಯಾತ ಕಲಾವಿದ ರೋರಿಚ್ ಎಂಬ ದಂಪತಿಗಳು.

ಈ ಎಸ್ಟೇಟಿನಲ್ಲಿ ಸುಮಾರು 300 ಮಂದಿ ಹರಿಜನ ಅನಕ್ಷರಸ್ತ ಕೂಲಿಕಾರರು ದುಡಿಯುತ್ತಿದ್ದಾರೆ. ಈ ಕಾರ್ಮಿಕರನ್ನು ವಂಚಿಸಿ ಈ ಎಸ್ಟೇಟಿನ ಮಾಲೀಕರು ಕೂಲಿ ಕಡಿಮೆಕೊಟ್ಟು, ಹೆಚ್ಚು ಕೆಲಸ ಮಾಡಿಸಿಕೊಂಡು ಈ ದಲಿತ ಕಾರ್ಮಿಕರಿಗೆ ಯಾವ ಸೌಕರ್ಯವನ್ನೂ ಒದಗಿಸದೆ ಮಾಲೀಕರು ಮಾತ್ರ ಸುಖ-ಸುಪ್ಪತ್ತಿಗೆಯಲ್ಲಿ ಮೆರೆಯುತ್ತಾ ಈ ಕಾರ್ಮಿಕರ ದುಡಿತದಿಂದ ಕೋಟ್ಯಾಧೀಶರಾಗಿದ್ದಾರೆ.

ಈ ಕಾರ್ಮಿಕರು ಸಂಘದ ಆಶ್ರಯದಲ್ಲಿ ಸಂಘಟನೆಯಾಗಿ ತಮ್ಮ ನ್ಯಾಯಯುತವಾದ ಬೇಡಿಕೆಗಳನ್ನಿಟ್ಟು ಹೋರಾಟ ಮಾಡುತ್ತಿದ್ದರು. ಆದ

(8ನೇ ಪುಟ ನೋಡಿ)

ಮಹಿಳೆಯ ಮೇಲಿನ ಅಮಾನುಷ ಅತ್ಯಾಚಾರದ ವಿರುದ್ಧ ದಲಿತರ ಪ್ರತಿಭಟನೆ

ವರದಿ : ಗಂಗಾರಾಂ

ಕೋಲಾರ ಜಿಲ್ಲೆ ಮಾಲೂರಿನಲ್ಲಿ ಸಾವಿರಕ್ಕೂ ಮೇಲ್ಪಟ್ಟು ದಲಿತ ಯುವಕರು, ಯುವತಿಯರು, ಕೂಲಿಗಾರರು ಕಲೆತು ಕರ್ನಾಟಕ ದಲಿತ ಸಂಘರ್ಷ ಸಮಿತಿ ಮಾಲೂರು ತಾಲ್ಲೂಕು ಶಾಖೆಯ ಆಶ್ರಯದಲ್ಲಿ ತಾ॥ 23-11-79 ರಂದು ಪಟ್ಟಣದ ಮುಖ್ಯ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ತಾಲ್ಲೂಕಿನ ರೆವಿನ್ಯೂ ಪೋಲೀಸು ಅಧಿಕಾರಿಗಳು, ಜಮೀನುದಾರರೊಂದಿಗೆ ಶಾಮೀಲಾಗುವುದರಿಂದ ದಲಿತರಿಗೆ ಗೋಮಾಳ, ಜನತಾ ಮನೆ, ನಿವೇಶನ, ರಕ್ಷಣೆ ದುರ್ಲಬವಾಗುತ್ತಿರುವುದರ, ಜಮೀನುದಾರರ ಹಲ್ಲೆ, ಹಿಂಸೆಗಳ ವಿರುದ್ಧ ಸಿಡಿದೆದ್ದ ದಲಿತ ಪ್ರತಿಭಟನೆಕಾರರ ಮುಗಿಲು ಬಿರಿಯುವಂತಿದ್ದ ಘೋಷಣೆಗಳು ಮೊಟ್ಟ ಮೊದಲಿಗೆ ಮಾಲೂರಿನ ಬೀದಿಗಳಲ್ಲಿ ಮೊಳಗಿದವು. ಲೈಬ್ರರಿ ಮೈದಾನದಿಂದ ಮೊದಲಾದ ಮೆರವಣಿಗೆ ತಾಲ್ಲೂಕು ಕಛೇರಿಗೆ ತೆರಳಿ ಭೂಮಿ ಹಂಚಿಕೆಯಲ್ಲಿ ದಲಿತರಿಗಾಗಿರುವ ಅನ್ಯಾಯಗಳನ್ನು ಸರಿಪಡಿಸುವಂತೆ ಒತ್ತಾಯಿಸಿದ್ದ ಮನವಿಯನ್ನು ಸಲ್ಲಿಸಿತು.

ಮೆರವಣಿಗೆಯ ಕೊನೆಯಲ್ಲಿ ಪುರಸಭೆ ವೃತ್ತದ ಬಳಿ ಮೆರವಣಿಗೆಯಲ್ಲಿ ಒಯ್ಯಲಾದ ತಾಲ್ಲೂಕು ಬೋರ್ಡ್ ಅಧ್ಯಕ್ಷ ಕೃಷ್ಣೇಗೌಡನ ಪ್ರತಿಕೃತಿಯನ್ನು ಸುಡಲಾಯಿತು.

(8ನೇ ಪುಟ ನೋಡಿ)

ಕ್ರೂರ

ಕೃಷ್ಣೇಗೌಡ

ಮತ್ತು

ಅವನ ತಮ್ಮಂದಿರಿಂದ

ಅಮಾನುಷ

ಅತ್ಯಾಚಾರಕ್ಕೊಳಗಾದ

ವಿಧವೆ ಅನುಸೂಯಮ್ಮ

ತನ್ನ ಮಗುವಿನೊಂದಿಗೆ



ಬೆಳೆಯೂ ದಕ್ಕಲಿಲ್ಲ—ಹೊಡೆತವೂ ತಪ್ಪಲಿಲ್ಲ

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಕರಡುಗೆರೆ ಕಾವಲಿನಲ್ಲಿ ತುರಚನಕಟ್ಟೆ, ಅಂಗನಕಟ್ಟೆ ಎಂಬ ಎರಡು ಕಾಲೋನಿಗಳೊಳಗೆ ನಿಲ್ಲಲು ನೆಲ ಇಲ್ಲದಂತ ದಲಿತರು 1952ರಿಂದ ಜಮೀನಿಗಾಗಿ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಾ ಬಂದಿದ್ದರೂ ಸರ್ಕಾರ ಇದರ ಬಗ್ಗೆ ಗಮನಹರಿಸದ ಕಾರಣ ತುಮಕೂರು ಜಿಲ್ಲಾ ದ. ಸಂ. ಸ. ಶಾಖೆಯು ಒತ್ತಾಯ ಮಾಡುತ್ತಾ ಬಂದಿತ್ತು.

ಈ ಒತ್ತಾಯದ ಮೇರೆಗೆ ಜಿಲ್ಲಾಧಿಕಾರಿಗಳು ಅಲ್ಲಿಗೆ ಬೇಟಿನೀಡಿ ಗಳಿಗೇನಹಳ್ಳಿ ಭೂಮಾಲೀಕ ಶುಂಠಿ ಹನುಮಯ್ಯ ಮತ್ತು ಅವನ ಅನುಯಾಯಿಗಳು ಸರ್ಕಾರದ ಭೂಮಿಯಲ್ಲಿ ಅತಿಕ್ರಮವಾಗಿ ಸಾಗುವಳಿ ಮಾಡುತ್ತಿದ್ದ ಜಮೀನನ್ನು ಬಿಡಿಸಿ 27 ಭೂರಹಿತ ಕುಟುಂಬಗಳಿಗೆ ತಲಾ 4 ಎಕರೆಯಂತೆ ಹಂಚಲಾಯಿತು. ಉಳುಮೆ ಚೀಟಿ ಪಡೆದ ದಲಿತರು ಈ ಭೂಮಿಯಲ್ಲಿ ಉಳುಮೆ ಮಾಡತೊಡಗಿದರು. ದಲಿತರ ದುಡಿಮೆಯು ಬೆವರಿನಿಂದ ಭೂಮಿ ಹಸಿರಾಯಿತು.

ತಾನು ಉಳುಮೆ ಮಾಡುತ್ತಿದ್ದ ಜಮೀನನ್ನು ಕಿತ್ತು ಹೊಲೆಮಾದಿಗರಿಗೆ ಹಂಚಿದರೆಂಬ ಅಸೂಯೆಯಿಂದ ದ್ವೇಷ ಸಾಧಿಸುತ್ತಿದ್ದ ಶುಂಠಿ ಹನುಮಂತಯ್ಯ ಮತ್ತು ಅವನ ಅನುಯಾಯಿಗಳಾದ ರಂಗಪ್ಪ, ನಾಗರಾಜ, ನರಸಮ್ಮ ಮುಂತಾದವರು 14–11–79ನೇ ಭಾನುವಾರ ನೂರಾರು ದನ–ಕುರಿಗಳನ್ನು ದಲಿತರ ಭೂಮಿಯೊಳಗೆ ಬಿಟ್ಟು ಬೆಳೆಯನ್ನು ಬುಡಕತ್ತ ಮೇಯಿಸಿದರು. ಹಸಿರು ಕುಕ್ಕುತಿದ್ದ ಭೂಮಿ ಈಗ ಬಟ್ಟ ಬಯಲಾಯಿತು. ಅಷ್ಟಿಷ್ಟು ಗಂಜಿಗಾಗುತಿದ್ದ ಬೆಳೆಯು ದಕ್ಕದೆ ದಲಿತರು ಕಂಗಾಲಾದರು.

ದಲಿತರ ಮೇಲೆ ದಾಳಿ

ಇದರಿಂದ ದಿಗ್ಭ್ರಮೆಗೊಂಡ ದಲಿತರು "ಈ ಭೂಮಿಯನ್ನ ಸರ್ಕಾರದವರು ನಮಗ ಕೊಟ್ಟವ್ರೆ ಯಾಕ್ ದನ–ಕುರಿ ಮೇಯಿಸ್ತೀರಪ್ಪ" ಎಂದು ಕೇಳಿದರು. ಅಷ್ಟು ಹೊತ್ತಿಗೆ ಸಿದ್ಧತೆಯಾಗಿ ಬಂದಿದ್ದ ಶುಂಠಿ ಹನುಮಂತಯ್ಯ ಮತ್ತು ಅವನ ಅನುಯಾಯಿಗಳು ದೊಣ್ಣೆ ಕುಡುಗೋಲು ಮುಂತಾದ ಮಾರಕ ವಸ್ತುಗಳಿಂದ ದಲಿತರ ಕೈ ಕಾಲು ಮುರಿಯುವಂತೆ ಬಡಿದರು.

ಗಾಯಗೊಂಡ 10 ಮಂದಿ ದಲಿತರನ್ನು ಕೇಳಗೇನ ಹಳ್ಳಿ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಯಿತು. ಇವರಲ್ಲಿ ಮೂವರು ಭಾರಿ ಪೆಟ್ಟುಗೊಳಗಾಗಿದ್ದಾರೆ. ತಲೆ ಮತ್ತು ಕಿವಿಗೆ ತೀವ್ರವಾಗಿ ಪೆಟ್ಟು ಬಿದ್ದಿರುವ ನರಸಿಂಹಯ್ಯನವರ ಸ್ಥಿತಿ ಚಿಂತಾಜನಕವಾಗಿದೆ.

ಭೀತಿಯಿಂದ ದಿಕ್ಕೆಟ್ಟ ದಲಿತರು

ಈಗ ಕರಡುಗೆರೆ ಕಾವಲಿನ ದಲಿತರು ಭಯಗ್ರಸ್ತರಾಗಿದ್ದಾರೆ ಈ ಸವರ್ಣೀಯ ಭೂಮಾಲಿಕರಾದ ಶುಂಠಿ ಹನುಮಯ್ಯ ಮತ್ತು ಅವನ ಸಹ ಪಾರ್ಟಿಗಳು ದಲಿತರ ಮೇಲೆ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದಾರೆ. "ನಿಮ್ಮನ್ನು ಪೆಟ್ರೋಲ್ ಹಾಕಿ ಸುಡ್ತೇವಿ" "ನಿಮ್ಮ ಬಾವಿಗೆ ವಿಷ ಹಾಕಿ ಸಾಯಸ್ತೀವಿ" ಎಂದು ಹಲವಾರು ರೀತಿಯಿಂದ ಹೆದರಿಸುತ್ತಿದ್ದಾರೆ. ಈ ಭೂಮಾಲಿಕರಿಗೆ ತುಮಕೂರು ಜಿಲ್ಲೆಯ ಎಂ. ಪಿ. ಯಾದ ಕೆ. ಲಕ್ಕಪ್ಪನವರ ಬೆಂಬಲವಿದೆಯೆಂದು ತಿಳಿದುಬಂದಿದೆ.

ಆದ್ದರಿಂದ ಇಲ್ಲಿನ ದಲಿತರಿಗೆ ಈಗ ರಕ್ಷಣೆ ಬೇಕಾಗಿದೆ. ತುಮಕೂರು ಜಿಲ್ಲಾಧಿಕಾರಿಗಳು ಈ ಸ್ಥಳಕ್ಕೆ ಬೇಟಿಕೊಟ್ಟು ದಲಿತರಿಗೆ ರಕ್ಷಣೆ, ನ್ಯಾಯ ಒದಗಿಸಬೇಕೆಂದು ದ.ಸಂ.ಸ. ಯು ಸರ್ಕಾರವನ್ನು ಒತ್ತಾಯಿಸುತ್ತಿದೆ. []

ಭಂಕೂರು ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ

ಗುಲ್ಬರ್ಗಾ ಜಿಲ್ಲೆಯ ಶಹಬಾದ ಪಟ್ಟಣದ ಸಮೀಪದ ಭಂಕೂರು ಗ್ರಾಮದಲ್ಲಿ ಅಸ್ಪೃಶ್ಯತೆ ಆಚರಣೆ ಮುಂದುವರೆಯುತ್ತಿದೆ. ಸು. 1500 ಮನೆಗಳಿರುವ ಇಲ್ಲಿ ದಲಿತರವು ಸುಮಾರು 100 ಇಲ್ಲಿಯ ಬಹಳಷ್ಟು ಶಿಕ್ಷಿತರು ಶಹಾಬಾದಿನ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ಕೈಗಾರೀಕರಣಕ್ಕೊಳಗಾಗುತ್ತಿರುವ ಈ ಪರಿಸರದಲ್ಲಿ ಅಸ್ಪೃಶ್ಯತೆ, ಜಾತೀಯ ಭಾವನೆಗಳು, ಕಟ್ಟು ಪಾಡುಗಳು ಸಡಿಲಗೊಳ್ಳುವ ಬದಲು ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತೇವೆ.

ಇಂಡಿಯಾದ ಎಲ್ಲ ಹಳ್ಳಿಗಳಂತೆ ಇಲ್ಲಿ ಕೂಡ ನೀರು ಮುಟ್ಟಿಸುವುದು, ದೇವಸ್ಥಾನ ಪ್ರವೇಶ, ಹೋಟೆಲ್ ಪ್ರವೇಶ ಇತ್ಯಾದಿ ದಲಿತರಿಗೆ ನಿಷೇದಿಸಲ್ಪಟ್ಟವೆ.

ಭಂಕೂರಿನ ಅಂಬೇಡ್ಕರ್ ಸಂಘದವರು ಈ ಕುರಿತು ಪೋಲೀಸಿಗೆ ದೂರು ಕೊಟ್ಟಿದ್ದರೂ ಏನೊಂದೂ ಕ್ರಮ ಕೈಗೊಂಡಿಲ್ಲ.

ದಲಿತ ನುಡಿ

ಈಗಿನ ಜಮೀನ್ದಾರಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ನೆಪ ಮಾತ್ರದ ಭೂ ಸುಧಾರಣೆಯಿಂದ ಕೃಷಿಕಾರ್ಮಿಕರ ಸಮಸ್ಯೆ ಬಗೆಹರಿಯಲಾರದು. 'ಸಾಮೂಹಿಕ ವ್ಯವಸಾಯ' ಮಾತ್ರ ದಲಿತರನ್ನು ಶೋಷಣಾ ಮುಕ್ತರನ್ನಾಗಿಸುವುದು.

—ಅಂಬೇಡ್ಕರ್

ಬಣದಾಳ ಗ್ರಾಮದ ದಲಿತರ ಮೇಲೆ ಹಲ್ಲೆ

ಗುಲಬರ್ಗ ತಾಲ್ಲೂಕು ಬಣದಾಳು ಗ್ರಾಮದಲ್ಲಿ ತಾ॥ 26–10–79, ರಂದು ಕುರಿ ಕಾಯುತಿದ್ದ ದಲಿತ ಕೃಷ್ಣಪ್ಪ ಮತ್ತು ಚೆಟ್ಟೆಪ್ಪನವರ ಮೇಲೆ ಸವರ್ಣೀಯ ಶೇರಿಕಾರ ಶಾಣಪ್ಪ ಮತ್ತು ಆತನ ಗುಂಪು ಹೊಲಕ್ಕೆ ಕುರಿ ಬಿಟ್ಟ ಆರೋಪದ ಮೇಲೆ ಹಲ್ಲೆ ನಡೆಸಿದೆ.

ಹಲ್ಲೆಗೊಳಗಾದ ಕೃಷ್ಣಪ್ಪನ ಮರ್ಮಾಂಗಕ್ಕೆ ಪೆಟ್ಟಾಗಿದ್ದು ಇನ್ನೂ ಚೇತರಿಸಿಕೊಂಡಿಲ್ಲ. ಈಗಿರುವಾಗಲೇ ಶೇರಿಕಾರ ಶಾಣಪ್ಪ ಅವಾಚ್ಯ ಶಬ್ದಗಳಿಂದ ಬೈಯ್ದು ಜಗಳ ಕಾಯುತ್ತಾ ಇನ್ನೊಮ್ಮೆ ಹಲ್ಲೆ ನಡೆಸುವ ಸಿದ್ಧತೆಯಲ್ಲಿ ತೊಡಗಿದ್ದಾನೆಂದು ತಿಳಿದು ಬಂದಿದೆ.

ಆರ್. ಜಿ. ವಿದ್ಯಾರ್ಥಿನಿಲಯದ ಮೇಲೆ ಗೂಂಡಾದಾಳಿ

ಬೆಂಗಳೂರು, ಶ್ರೀರಾಮಪುರಂನ ಆರ್. ಗೋಪಾಲಸ್ವಾಮಿ ಐಯರ್ ದಲಿತ ವಿದ್ಯಾರ್ಥಿ ನಿಲಯದ ಮೇಲೆ ತಾ॥ 2–12–79ರ ರಾತ್ರಿ 9–30 ಘಂಟೆಯಲ್ಲಿ 3 ಮಂದಿ ಗೂಂಡಾಗಳು ದಾಳಿ ಮಾಡಿ ವಿದ್ಯಾರ್ಥಿಗಳನ್ನು ಥಳಿಸಿದ್ದಾರೆ. ಮಹದೇವಯ್ಯ ಎಂಬ ವಿದ್ಯಾರ್ಥಿಗೆ ತೀವ್ರ ಗಾಯಗಳಾಗಿವೆ.

ತಾ॥ 30–11–79ರಂದು ಮಧ್ಯಾಹ್ನ 3 ಗಂಟೆಯಲ್ಲಿ ಆಡಳಿತ ವರ್ಗ ಹಾಸ್ಟೆಲಿನಿಂದ ಒಂದು ಮೂಟೆ ಗೋದಿ ಅಕ್ರಮ ಸಾಗಣೆ ಮಾಡಿಸುತ್ತಿದ್ದದನ್ನು ಕಂಡ ವಿದ್ಯಾರ್ಥಿಗಳು ಪ್ರತಿಭಟಿಸಿದ್ದಾರೆ. ಈ ಹಿನ್ನೆಲೆಯಲ್ಲೇ ದಾಳಿ ನಡೆದಿರುವುದಾಗಿ ತಿಳಿದು ಬಂದಿದೆ.

ಈ ಹಿಂದಿನಿಂದಲೂ ಆಡಳಿತ ವರ್ಗದ ಅಕ್ರಮಗಳ ವಿರುದ್ಧ ವಿದ್ಯಾರ್ಥಿಗಳು ಹೋರಾಡುತ್ತಿದ್ದಾರೆ. ಆಡಳಿತ ವರ್ಗವನ್ನು ವಜಾ ಮಾಡಿ ವಿದ್ಯಾರ್ಥಿ ನಿಲಯವನ್ನು ಸರ್ಕಾರ ವಹಿಸಿಕೊಳ್ಳುವಂತೆ ಒತ್ತಾಯಿಸಿ ಮುಷ್ಕರ ಪ್ರಾರಂಭಿಸಲಿದ್ದಾರೆ.

ದೇವಲಪಲ್ಲಿಯಲ್ಲಿ ದಲಿತನ ಕೊಲೆ ಯತ್ನ

ರಾಯಚೂರು ತಾಲ್ಲೂಕು ದೇವಲಪಲ್ಲಿ ಗ್ರಾಮದ ದಲಿತ ಹನುಮಂತ ಅವರನ್ನು ರಾಜುಲಬಂಡೆ ಗ್ರಾಮದ ಸವರ್ಣೀಯ ಗಂಡ್ರ ಗೋಪಾಲರೆಡ್ಡಿ, ಮತ್ತು ಗಂಡ್ರ ತಿಮ್ಮಯ್ಯ ಮುಂತಾದವರು ಸೇರಿ ಬಂಡಿಯ ಗೂಟಗಳಿಂದ ಥಳಿಸಿ ಕೊಲೆಯತ್ನ ನಡೆಸಿದ್ದಾರೆ.

ಹನುಮಂತ ಅವರು ತನ್ನ ಅಕ್ಕನ ಊರಾದ ರಾಜುಲಬಂಡೆಗೆ ಹೋಗಿದ್ದಾಗ ಮೇಲ್ಕಿಳಿಸಿದ ದೌರ್ಜನ್ಯಗಾರರು ಈ ಹಲ್ಲೆ ನಡೆಸಿದ್ದಾರೆ. ಈ ಹಿಂದೆ ಹನುಮಂತ ತನ್ನ ಹೊಲದಲ್ಲಿ ದನ ಮೇಯಿಸುತ್ತಿದ್ದ ಗೋಪಾಲರೆಡ್ಡಿಯನ್ನು ಯಾಕೆಂದು ಕೇಳಲಾಗಿ ಜಗಳವಾಗಿತ್ತೆನ್ನಲಾಗಿದೆ. ಅಂದಿನಿಂದ ಗೋಪಾಲರೆಡ್ಡಿ ಕಡೆಯ ಜನ ಆಗಾಗ ಬೈದು ಜಗಳ ಕಾಯುತ್ತಿದ್ದರೆನ್ನಲಾಗಿದೆ. ತಾರೀಖು 18–11–79ರಂದು ರಾಜುಲ ಬಂಡೆಗೆ ಬಂದ ಹನುಮಂತ ಅವರ ಮೇಲೆ ಈ ಯೋಜಿತ ಹಲ್ಲೆ ನಡೆಸಿದ್ದಾರೆ. ಗಾಯಗೊಂಡ ಹನುಮಂತ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಹಲ್ಲೆಯ ಕುರಿತಾಗಿ ಹತ್ತಿರದ ಯರಗೇರಾ ಪೋಲೀಸು ಠಾಣೆಗೆ ದೂರು ನೀಡಿದ್ದರೂ ಇದುವರೆಗೂ ಏನೊಂದೂ ಕ್ರಮ ಕೈಗೊಂಡಿಲ್ಲ. ರಾಯಚೂರು ದಲಿತ ಸಂಘರ್ಷ ಸಮಿತಿಯ 25 ಮಂದಿ ಕಾರ್ಯಕರ್ತರು ಗ್ರಾಮಕ್ಕೆ ಬೇಟಿನೀಡಿ ಹಲ್ಲೆಗೀಡಾದವರಿಗೆ ಧೈರ್ಯ ತುಂಬಿ ಸೂಕ್ತ ಕ್ರಮಕ್ಕೆ ಒತ್ತಾಯಿಸಿದ್ದಾರೆ. []

ದಲಿತರ ಸೈಟಿನಲ್ಲಿ ಧಣಿಗಳ ತಿಪ್ಪೆ

ಮಾಗಡಿತಾಲ್ಲೂಕು ತಾವರೆಕೆರೆ ಹೋಬಳಿ ದೋಣೇನಹಳ್ಳಿಯಲ್ಲಿ ದಲಿತ ಜನಾಂಗದ ಮೇಲೆ ಆಗುತ್ತಿರುವ ಕಿರುಕುಳ ವಿಚಿತ್ರವಾಗಿದೆ. ಈ ಊರಿನ ದಲಿತರಿಗೆ 1958ರಲ್ಲಿಯೇ ಸೈಟು ಮಂಜೂರಾದವು. 21 ವರ್ಷಗಳ ಕಾಲ ಸತತವಾಗಿ ಪ್ರಯತ್ನಿಸಿದರೂ ಆ ಸೈಟನ್ನು ಈ ದಲಿತರು ಪಡೆಯಲಾಗಿಲ್ಲ. ಸರ್ಕಾರಕ್ಕೆ ಮಾಡಿಕೊಂಡ ಮನವಿಗಳು ಮಣ್ಣುಪಾಲಾಗಿವೆ.

ಹರಿಜನ ಜಾತಿಯಲ್ಲೇ ಒಬ್ಬ ಪುಢಾರಿ ದಲಿತರಿಗೆ ಮಂಜೂರಾದ $33^1/_2$ ಕುಂಟೆ ಜಮೀನನ್ನು ಆಕ್ರಮಿಸಿಕೊಂಡು 20 ವರ್ಷಗಳಿಂದಲೂ ಅನುಭವಿಸುತ್ತಿದ್ದಾನೆ. ಈತನಿಗೆ ಊರಿನಲ್ಲಿ ಒಳ್ಳೆಯ ಮನೆ, 8 ಎಕರೆ ತೋಟ, 8 ಎಕರೆ ಗದ್ದೆ 4 ಬಾವಿಗಳಿದ್ದು ದಲಿತರ ಸೈಟಿನ ಜಾಗದ ಮೇಲೂ ದುರಾಸೆ ಪಟ್ಟಿದ್ದಾನೆ. ಆಸೆಗೆ ಕೊನೆಯುಂಟೆ? ಜನ ಇವನನ್ನು ಮಾಜಿ ಎಂದು ಕರೆಯುತ್ತಾರೆ. ಯಾಕೆಂದರೆ ಒಂದು ಕಾಲದಲ್ಲಿ ಈತ ತಾಲ್ಲೋಕು ಬೋರ್ಡ್ ಮೆಂಬರ್ ಆಗಿದ್ದನಂತೆ. ಹಣ ಮತ್ತು ರಾಜಕೀಯ ಪ್ರಭಾವದಿಂದ ಸೈಟು ತನ್ನ ಬಂಧುಗಳಿಗೆ ವಿತರಣೆ ಆಗದಂತೆ ಈ ಮಾಜಿ ಎಚ್ಚರ ವಹಿಸಿದ್ದಾನೆ.

ದೋಣೇನಹಳ್ಳಿಯ ಅನೇಕ ದಲಿತರ ಜಮೀನುಗಳನ್ನು 50, ರೂಪಾಯಿ, 100ರೂಪಾಯಿಗಳ ಕಾರಣದಿಂದಲೇ ವಶಪಡಿಸಿಕೊಂಡು ದಿನದಿನಕ್ಕೂ ಶ್ರೀಮಂತನಾಗುತ್ತಿದ್ದಾನೆ. ಇಬ್ಬರು ದಲಿತರನ್ನು ಮನೆಯಲ್ಲಿ ಜೀತಕ್ಕೆ ಇಟ್ಟುಕೊಂಡಿದ್ದಾನೆ. ದಲಿತರಿಗೆ ಸಿಗಬೇಕಾದ ಸೈಟಿನಲ್ಲಿ ಇವನ ಕಣ, ಹುಲ್ಲು ಹಿತ್ತಲು ಸ್ಥಾಪನೆ ಆಗಿವೆ. ಎತ್ತು ಕುರಿ ಕಟ್ಟಲು ಕೊಟ್ಟಿಗೆಗಳಿವೆ. ಜೊತೆಗೆ ಆ ಜಾಗದಲ್ಲೇ ಎರಡು ತಿಪ್ಪೆಗಳಿವೆ. ತಮಗೆ ಅನ್ಯಾಯ ಮಾಡಿ ಕೊಬ್ಬುತ್ತಿರುವ ಇವನ ಶ್ರೀಮಂತಿಕೆಯನ್ನು ಕಂಡು ಬಡವರು ತೃಪ್ತಿ ಪಡಬೇಕೆ? ಈ ಖೋಟಾ ಹರಿಜನ ನಾಯಕನ ಮೇಲೆ ಕ್ರಮ ಜರುಗಿಸಿ ಬಡದಲಿತರಿಗೆ ಕೂಡಲೇ ಸೈಟುವಿತರಣೆ ಮಾಡಬೇಕೆಂದು ದಲಿತ ಸಂಘರ್ಷ ಸಮಿತಿಯು ಸರ್ಕಾರವನ್ನು ಒತ್ತಾಯಮಾಡುತ್ತದೆ. []

ಹೊಳಲ್ಕೆರೆಯಲ್ಲಿ ದಲಿತ ವಿದ್ಯಾರ್ಥಿಗಳ ಪ್ರದರ್ಶನ

ಶಿವಮೊಗ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ಸರ್ಕಾರದ ಮೇಲ್ವಿಚಾರಣೆಯಲ್ಲಿರುವ ದಲಿತ, ಹಿಂದುಳಿದ ವರ್ಗದ ವಿಧ್ಯಾರ್ಥಿ ನಿಲಯದಲ್ಲಿ ಕೊಡುವ ಕಳಪೆ ಊಟ, ತಿಂಡಿ, ಪ್ರತಿಭಟಿಸಿ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು. ಈ ಹಿಂದೆ ಕುಂದು ಕೊರತೆಗಳನ್ನು ಸರಿಪಡಿಸುವಂತೆ ಮನವಿ ಮಾಡಿಕೊಂಡಿದ್ದರೂ ಪ್ರಯೋಜನ ಕಾಣದ್ದರಿಂದ ಡಿಸೆಂಬರ್ 3 ರಂದು ಈ ಪ್ರದರ್ಶನ ನಡೆಯಿತೆನ್ನಲಾಗಿದೆ.

ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದ ಪ್ರದರ್ಶನಕಾರರು ವಿದ್ಯಾರ್ಥಿ ನಿಲಯದ ವಾರ್ಡನ್ ಮತ್ತು B.D.O. ರವರ ವಿರುದ್ಧ ಘೋಷಣೆಗಳನ್ನು ಕೂಗಿ ತನಿಖೆಗೆ ಒತ್ತಾಯಿಸಿದರು.

ಅನಸೂಯಮ್ಮನವರ ಮನೆಯ ಮೇಲೆ ದಾಳಿ

ಇತ್ತೀಚೆಗೆ ಅನುಸೂಯಮ್ಮನ ಮೇಲೆ ನಡೆದ ಕೃಷ್ಣೇಗೌಡನ ಅತ್ಯಾಚಾರ ಪ್ರತಿಭಟಿಸಿ 29–11–79ರಂದು ಆತನ ಪ್ರತಿಕೃತಿ ಸುಟ್ಟನಂತರವೂ ಪೋಲೀಸರು ಏನೊಂದೂ ಕ್ರಮ ಕೈಗೊಳ್ಳದ್ದರಿಂದ ತಾ॥ 4–12–79ರ ಬೆಳಿಗ್ಗೆ ಕೃಷ್ಣೇಗೌಡನ ಗುಂಪು ಅನುಸೂಯಮ್ಮನವರ ಹೊಲದ ರಾಗಿ ಬೆಳೆಯನ್ನು ಪೂರ್ಣ ಕಟಾವು ಮಾಡಿದೆ. ಹಾಗೂ ಮನೆಯ ಮೇಲೆ ದಾಳಿ ನಡೆಸಿ ವರಂಡಾದ ಹೆಂಚುಗಳನ್ನು ಕಿತ್ತೆಸೆದು ಮಡಿಕೆ ಬೇಯಿಸುವ 'ಹಾವುಗೆ'ಯನ್ನು ನಾಶ ಮಾಡಿದೆ.

ಮಹಿಳೆಯರ ಪ್ರತಿಭಟನಾ ಮೆರವಣಿಗೆ

ಅನುಸೂಯಮ್ಮನ ಮೇಲಾದ ಅತ್ಯಾಚಾರ ಹಾಗೂ ಅಮಾನುಷ ದೌರ್ಜನ್ಯ ಖಂಡಿಸಿ ಕೋಲಾರ ಜಿಲ್ಲೆಯ 'ದಲಿತ ವಿಮೋಚನಾ ಸಮಿತಿ'ಯಿಂದ ತಾ॥ 10–11–79ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಕೋಲಾರದಲ್ಲೊಂದು ಪ್ರತಿಭಟನಾ ಮೆರವಣಿಗೆ ಏರ್ಪಡಿಸಲಾಗಿದೆ. ಎಲ್ಲ ಪ್ರಗತಿಪರ ಮಹಿಳಾ ಸಂಘ ಸಂಸ್ಥೆಗಳ ಪ್ರತಿನಿಧಿಗಳೂ ಭಾಗವಹಿಸಲಿರುವ ಈ ಮೆರವಣಿಗೆಯ ನಂತರ ನಚಿಕೇತ ನಿಲಯದಲ್ಲಿ ಒಂದು ದಿನದ ಮಹಿಳಾ ಸಮ್ಮೇಳನವನ್ನು ವ್ಯವಸ್ಥೆ ಮಾಡಲಾಗಿದೆ.

ದಲಿತರ ಬಂಡಾಯದ
ಕೂಗು
'ಪಂಚಮ'ಕ್ಕೆ
ಚಂದಾದಾರರಾಗಿರಿ

ರಾಷ್ಟ್ರ ಸಮಾಜವಾದದ ಬಗ

[ನವೆಂಬ

ಸಮಾಜವಾದ :

ಸಮಾಜವಾದವನ್ನು ಬೇರೆ ಬೇರೆ ರೀತಿ ವಿಶ್ಲೇಷಿಸಿರುವರು. ವಿಶಾಲವಾದ ಅರ್ಥದಲ್ಲಿ ಹೇಳುವುದಾದರೆ ಸಮಾಜವಾದದ ಬಗ್ಗೆ ಮೂರು ಮುಖ್ಯವಾದ ಸೈದ್ಧಾಂತಿಕ ಪರಂಪರೆಗಳು ಇರುವುದನ್ನು ನಾವು ಗುರ್ತಿಸಿಕೊಳ್ಳಬಹುದು. (1) ಮಧ್ಯಮ ವರ್ಗದ ಸಮಾಜವಾದ (2) ಆದರ್ಶ ಸಮಾಜವಾದ (3) ವೈಜ್ಞಾನಿಕ ಸಮಾಜವಾದ. ಈ ಲೇಖನಕ್ಕೆ ಕೆಲವು ಮಿತಿಗಳು ಇರುವುದರಿಂದ ಇವು ಮೂರನ್ನು ಇಲ್ಲಿ ವಿಸ್ತಾರವಾಗಿ ಚರ್ಚಿಸಲು ಸಾಧ್ಯವಿಲ್ಲ. ಆದರೆ ಈ ರೀತಿಯ ಸೈದ್ಧಾಂತಿಕ ಪರಂಪರೆಗಳೇ ಮುಂದೆ ಮಾರ್ಕ್ಸ್, ಏಂಜಲ್ಸ್ ಅಂಥವರು 'ವೈಜ್ಞಾನಿಕ ಸಮಾಜವಾದ'ವೆಂಬ ಹೆಸರಿನಿಂದ ಕ್ರಿಯೆಗೆ ತೊಡಗಿದುದನ್ನು ನಾವು ಇಲ್ಲಿ ಕಂಡುಕೊಳ್ಳಬೇಕು.

ವೈಜ್ಞಾನಿಕ ಸಮಾಜವಾದ ಎನ್ನುವುದು ವಿವಾದಾತ್ಮಕವಾದ ಹಾಗೂ ವೈಯಕ್ತಿಕವಾಗಿ ತನ್ನದೇ ಆದ ದೃಷ್ಟಿಕೋನದಿಂದ ಇತಿಹಾಸವನ್ನು ಸೃಷ್ಟಿಸುವಂತಹುದಾಗಿರುವುದು. ಇದು ಮಾಲೀಕರಿಗೂ ಮತ್ತು ಆಳುಗಳಿಗೂ, ಬಂಡವಾಳಶಾಹಿಗಳಿಗೂ ಮತ್ತು ದಿನಗೂಲಿಗಳಿಗೂ ಇರುವ ವೈರುಧ್ಯವನ್ನು ಹೇಳುವುದಲ್ಲದೆ ಉತ್ಪಾದನೆಯಲ್ಲಿರುವ ಅರಾಜಕತೆಯನ್ನೂ ಗುರ್ತಿಸುವುದು. ಈ ರೀತಿಯ ಅಸಂಬದ್ಧತೆಯಿಂದುಂಟಾದ ಪರಿಣಾಮ ಎಂದರೆ ಶ್ರಮಿಕ ವರ್ಗ, ಕಾರ್ಖಾನೆಯ ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು—ಇವರೆಲ್ಲಾ ಸೇರಿ ಸಾರ್ವಜನಿಕ ಅಧಿಕಾರವನ್ನು ಅಂದರೆ ರಾಷ್ಟ್ರಶಕ್ತಿಯನ್ನು ತಮ್ಮ ಹತೋಟಿಗೆ ತೆಗೆದುಕೊಳ್ಳುವರು. ಈ ಕಾರಣದಿಂದಾಗಿ ಸಮಾಜದ ಉತ್ಪಾದನೆಯ ಮೂಲಗಳು ಸುಹುಕಾರರಿಂದ ಜಾರಲು ತೊಡಗುತ್ತವೆ. ಈ ರೀತಿಯ ವ್ಯವಸ್ಥೆಯಿಂದ ಶ್ರಮಿಕವರ್ಗ ಉತ್ಪಾದನೆಯ ಮೂಲಗಳನ್ನು ಅದರ ಮೊದಲ ಗುಣವಾದ 'ಬಂಡವಾಳ' ಎಂಬುದರಿಂದ ಬಿಡುಗಡೆ ಹೊಂದುವಂತೆ ಮಾಡುವರು. ಆಗ ತಮ್ಮಷ್ಟಕ್ಕೆ ತಾವೇ ಉತ್ಪಾದನೆಯ ಮೂಲಗಳು ಸಾಮಾಜಿಕತೆಯನ್ನು ಪಡೆದುಕೊಳ್ಳುತ್ತವೆ. ಮೊದಲು ಯೋಚಿಸಿಕೊಂಡಿದ್ದ ಯೋಜನೆಯ ರೀತಿ ಉತ್ಪಾದನೆಯಲ್ಲಿ ಸಾಮಾಜೀಕರಣ ಎನ್ನುವ ಅಂಶ ಅಂತಾದಾಗ ಮಾತ್ರ ಸಾಧ್ಯವಾಗುತ್ತದೆ. ಆಗ ತನ್ನಷ್ಟಕ್ಕೆ ತಾನೇ ಸಮಾಜದ ಉತ್ಪಾದನೆಯಲ್ಲಿ ಮತ್ತು ಸಾರ್ವಜನಿಕ ಪ್ರಭುತ್ವದಲ್ಲಿ ಇದ್ದಂಥ ಅರಾಜಕತೆಯು ಅಳಿಸಿಹೋಗುವುದು. ಆಗ ಸಹಜವಾಗಿ ಶ್ರಮಿಕವರ್ಗ ತಮಗೆ ಬೇಕಾದ

ಮಾರ್ಗದಲ್ಲಿ ಸಮಾಜವನ್ನು ರಚಿಸುವ[...] ಆ ತರುವಾಯದಲ್ಲಿ ಇಡೀ ಪ್ರಕೃತಿಯ ಉ[...]ನೆಯ ಮೂಲ ಅಂಶಗಳ ಒಡೆಯರೂ, [...] ತಾವೇ ಒಡೆಯರೂ ಆಗಿ ಸಂಪೂರ್ಣ ಅ[...] ಸ್ವತಂತ್ರರಾಗುವರು.

ಈ ರೀತಿಯ ಸಾಮಾಜಿಕರಣ ಸಿದ[...] ಒಂದು ಮಹತ್ತರವಾದ ಕ್ರಿಯೆಗೆ ಮಾರ್ಗದ[...] ವಾಗಬೇಕೆ ಹೊರತು ಸತ್ತ ಧಾರ್ಮಿಕ ಸಿದ[...]

ಮೂಲ : ಡಿ. ಎಚ್. ಶ್ರೀಕಾಂತ್

ಅನು : ದೇವಯ್ಯ ಹರವೆ

ಗಳಂತಾಗಬಾರದು. ಈ ಒಂದು ಸಿದ್ಧಾಂತ[...] ತಕ್ಕೆ ಒಳಗಾದ ಜನರು ಅನಿವಾರ್ಯವಾಗಿ [...] ಸರಿಸಲೇ ಬೇಕಾದ ಮತ್ತು ತಮ್ಮ ಬಿಡು[...]ಗಾಗಿ ತಾವೇ ಕ್ರಾಂತಿಕಾರಿ ಹೋರಾಟ[...] ಪ್ರಾರಂಭಿಸಬೇಕಾದ ಮಾರ್ಗವನ್ನು ಸೂ[...]ವುದು. ಯಾಕೆಂದರೆ ಮಾಲೀಕರು ಮತ್ತು [...]

ದಲಿತ ಕಲಾ ಮಂಡಳಿಯ ಒಂದು ವಾರದ

ಶೋಷಿತ ಜನತೆಯ ಭಾವನೆಗಳನ್ನು ಕ್ರಾಂತೀಕರಿಸಿ ದಲಿತ ಸಂಘರ್ಷ ಸಮಿತಿಯ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಕೋಲಾರದ ದಲಿತ ಕಲಾ ಮಂಡಳಿಯಿಂದ ತಾ॥ 1-11-79 ರಿಂದ 7-11-79 ರವರೆಗೆ ಮಾಲೂರು ತಾಲ್ಲೂಕಿನಲ್ಲಿ ಒಂದು ವಾರದ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ತಾ॥ 1-11-79 ರಂದು ಮಾಲೂರಿನ ಸಂತೆಯಲ್ಲಿ ಮೊದಲ ಕಾರ್ಯಕ್ರಮ ನೀಡಿದ ನಂತರ ತಂಡ ಹಳ್ಳಿಗಳತ್ತ ತೆರಳಿತು. ಕಾಲುನಡಿಗೆಯ ಈ ತಂಡದ ಜಾಥಾದಲ್ಲಿ 25 ಮಂದಿ ಭಾಗವಹಿಸಿದ್ದರು. ಒಂದು ವಾರದಲ್ಲಿ 103 ಕಿ.ಮಿ. ಕ್ರಮಿಸಿದ ಈ ತಂಡ 23 ಹಳ್ಳಿಗಳಲ್ಲಿ 'ಪತ್ರೆ ಸಂಗಪ್ಪನ ಕೊಲೆ', 'ಜೀತದಹಟ್ಟಿ ರಂಗ' ನಾಟಕಗಳನ್ನು ಪ್ರದರ್ಶಿಸಿತು.

ಶತ ಶತಮಾನಗಳ ತುಳಿತದಿ ಸವೆದ ಬಾದೆಗಳಲ್ಲಿ ಬೆಂದ, ದಲಿತ ಬದುಕಿನ ಬವಣೆಯನ್ನು ಹಾಡುಗಳ ಮೂಲಕ ಹಾಡಿದಾಗ ಇದುವರೆಗೂ ಎದೆ ತುಂಬಿ ಮಡುಗಟ್ಟಿದ್ದ ಅಸಹಾಯಕತೆಯ ಒಳಗಿಂದ ತಡೆದಿಟ್ಟಿದ್ದ ಸಿಟ್ಟು, ರೋಷ, ನೋವು ತಕ್ಷಣದ ಪ್ರತಿಕ್ರಿಯೆಯ ರೂಪದಲ್ಲಿ ಹೊರ ಬೀಳುತ್ತಿತ್ತು. ಕತ್ತಲಲ್ಲಿ ಮುಳುಗಿ ಹೋದ ಜನ ಬೆಳಕಿಗೆ ತುಡಿಯುವಂತೆ ತಮ್ಮ ವಿಮೋಚನೆಯ ದಾರಿ ಹುಡುಕುವ ತವಕದಿಂದ ಎಣ್ಣೆಗಾಣದ ಕೆದರು ಗೂದಲಿನ ಮಾಸಿ ಗೆರೆಗಟ್ಟಿದ ಕರಿಮೋರೆಯ ಗುಳಿಬಿದ್ದ ಕಣ್ಣುಗಳಲ್ಲಿ ಆಶಾವಾದದ ಜಿನುಗು ಒಸರುತ್ತಿತ್ತು.

ಜಮೀನ್ದಾರೀ ಪದ್ಧತಿಯ ದವಡೆ[...] ಜಜ್ಜಿ ಹೋಗುತ್ತಿರುವ, ಅಸ್ಪೃಶ್ಯತೆ, ಜಾತೀ[...]ಯಿಂದ ಕುಗ್ಗಿ ಹೋಗುತ್ತಿರುವ ದಲಿತರಿಗೆ ನ[...] ಸಮಾನತೆಯ ಆಧಾರದ ಮಾನವೀಯ ವಿ[...]ಗಳು ಆಶಾದಾಯಕವಾಗಿ ಕಂಡರೆ ಹೊಟ್ಟೆ ತ[...]ದವರಿಗೆ ನಿರರ್ಥಕವಾಗಿ ಕಂಡು ಅಸಮಾ[...] 'ಸೃಷ್ಟಿನಿಯಮ' ಎಂದು ಪ್ರತಿಪಾದಿಸತೊ[...]ತ್ತಿದ್ದರು. ಕಾಲಡಿಯ ನೆಲ ಕುಸಿಯು[...] ಇಂಥ ಪ್ರತಿಪಾದನೆ ಅನಿವಾರ್ಯ.

ಎಲ್ಲ ಹಳ್ಳಿಗಳಲ್ಲೂ ನಮಗೆ ಜಾತಿ, [...] ಬೇಧವಿಲ್ಲದೆ ಸ್ವಾಗತ, ಬೆಂಬಲ ದೊರೆಯಿ[...] ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ [...] ಕಷ್ಟ, ಸುಖ, ನೋವು ಕುಂದು ಕೊರತೆಗಳ[...] ಕೇಳಿದಾಗ ಆತ್ಮೀಯವಾಗಿ ತಿಳಿಸುತ್ತಿದ್ದರು.

ಾ|| ಬಿ. ಆರ್. ಅಂಬೇಡ್ಕರ್ ವಿಶ್ಲೇಷಣೆ

ಯಿಂದ]

ನಿಯಂತ್ರಕರು–ಭೂಮಾಲೀಕರು ಮತ್ತು
ವಾಳಶಾಯಿಗಳು ತಾವು ದುರುಪಯೋಗ
ಕೊಳ್ಳುವ ಹೆಚ್ಚಿನ ಆದಾಯವನ್ನು ಕಾರ್ಮಿ
ಕೊಡುವುದಿಲ್ಲ. ನಿಯಮ ಪ್ರಕಾರವಾಗಿ
ಆದಾಯ ಕಾರ್ಮಿಕ ವರ್ಗಕ್ಕೂ ಸೇರ
ಆದರೆ ಇದನ್ನು ಮಾಲೀಕರು ತಡೆಹಿಡಿ
ರು. ಈ ದೃಷ್ಟಿಯಿಂದ ತುಳಿತಕ್ಕೆ ಒಳಗಾದ
ಹೋರಾಟದಿಂದ ಈ ಹೆಚ್ಚಿನ ಆದಾಯ
ಬರುವಂತೆ ಮಾಡಿಕೊಳ್ಳಬೇಕಲ್ಲದೆ ಆ
ೀನ ತಮ್ಮ ಸಮುದಾಯವನ್ನೇ ಉತ್ತಮ
ಕೊಳ್ಳುವಂತಾಗಬೇಕು.

ಆದರೆ ವಾಸ್ತವಿಕ ಸಂಗತಿ ಎಂದರೆ ರಾಜ
ಪ್ರಭುತ್ವ–ರಾಷ್ಟ್ರದ ಒಟ್ಟೂ ಆಡಳಿತ
ಆರ್ಥಿಕವಾಗಿ ಮುಂದುವರಿದವರ (ಭೂ
ಕರ ಮತ್ತು ಬಂಡವಾಳಶಾಯಿಗಳ)
ರುವುದು. ಆಗ ಇವರು ಸಹಜವಾಗಿಯೇ
ಶಕ್ತಿಯನ್ನು ಹಿಂಸಾತ್ಮಕವಾಗಿ ಉಪ
ಸಿಕೊಂಡು ಶಾಂತಿ ಮತ್ತು ನ್ಯಾಯಕ್ಕಾಗಿ
ನಡೆಯುವ ಇಂಥ ಚಳುವಳಿಗಳನ್ನು ಹತ್ತಿಕ್ಕು ವರು. ಬೇರೆಯ ಮಾತಿನಲ್ಲಿ ಹೇಳುವುದಾದರೆ ಯಾರು ಇಡೀ ಸಮಾಜದ ಆರ್ಥಿಕತೆಯ ಮೇಲೆ ಸರ್ವಾಧಿಕಾರದ ಹಿಡಿತವನ್ನು ಹೊಂದಿರುವರೋ ಅಂಥವರು ರಾಷ್ಟ್ರದ ಪ್ರಭುತ್ವವನ್ನು ತಮ್ಮ ಇಷ್ಟಕ್ಕೆ ಬಂದಂತೆ ಉಪಯೋಗಿಸುವ ಶಕ್ತಿಯನ್ನು ಹೊಂದಿರುವರು. ಹೀಗಾಗಿ ಅಲ್ಪಸಂಖ್ಯಾತ ಜನರು ಬಹು ಸಂಖ್ಯಾತರನ್ನು ಆಳುತ್ತಾರೆ. ಅದರಿಂದ ತುಳಿತಕ್ಕೆ ಒಳಗಾದ ಬಹು ಸಂಖ್ಯಾತ ಮಂದಿ ರಾಜಕೀಯ ಶಕ್ತಿಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಒಂದು ನ್ಯಾಯ ಸಮ್ಮತವಾದ ಹಕ್ಕಾಗಿರುವುದು. ಆ ಮುಖೇನ ಈಗ ಹಾಲಿ ಇರುವ ವ್ಯವಸ್ಥೆಯನ್ನು ನಾಶಮಾಡಬೇಕಾಗಿದೆ. ಹಾಗಾಗಿ ಈ ಒಂದು ಮಹತ್ವದ ಕೆಲಸ ಸಾಧಿಸುವಂತಹ ಸಮಯದಲ್ಲಿ ಶ್ರಮಿಕ ವರ್ಗ ಮೊದಲು ರಾಜ್ಯ ಪ್ರಭುತ್ವದ ಕಡೆಯಿಂದ ಬರುವ ಹಿಂಸಾತ್ಮಕವಾದ ಪ್ರತಿಭಟನೆಯನ್ನು ಎದುರಿಸಬೇಕಾಗುವುದು. ಅನಂತರ ತಾವು ಆರ್ಥಿಕತೆಯಲ್ಲಿ ಸಮಾನತೆಯನ್ನು ತರಬೇಕೆಂಬ ಯಾವ ಒಂದು ಪೂರ್ವ ನಿಯೋಜಿತವಾದ ಸಿಂದ್ಧಾಂತವನ್ನು ಇಟ್ಟುಕೊಂಡಿರುವರೋ ಅದಕ್ಕಾಗಿ ರಾಷ್ಟ್ರದ ಕಾರ್ಯಾಂಗದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಬೇಕಾಗುತ್ತದೆ.

ಈ ರೀತಿ ಬಂಡವಾಳಶಾಹಿ ವ್ಯವಸ್ಥೆಯಿಂದ ಸಮಾನತಾ ವ್ಯವಸ್ಥೆಗೆ ಬದಲಾಗುತ್ತಿರುವಾಗ ಅನಿವಾರ್ಯವಾಗಿ ಶ್ರಮಿಕವರ್ಗ ತಾವು ಹೋಗುತ್ತಿರುವ ಮಾರ್ಗವನ್ನು ಯಾರು ಮೊದಲು ತಡೆಯುವರೋ ಅಂಥ ಭೂ ಮಾಲೀಕರ ಮತ್ತು ಬಂಡವಾಳಶಾಹಿಗಳ ವಿರುದ್ಧ ಬಲಯುತವಾಗಿ ಹೋರಾಡಬೇಕಾಗುವುದು. ಈ ದೃಷ್ಟಿಯಿಂದ ಶ್ರಮಿಕರ ಸರ್ವಾಧಿಕಾರ ಬಹಳ ಅಗತ್ಯವೇ ಇಲ್ಲದೇ ಹೋದರೆ ಇವರು ಹೊಸದೊಂದು ಸಮಾಜ ನಿರ್ಮಿಸಲು ಸಾಧ್ಯವೇ ಇಲ್ಲ. ಯಾಕೆಂದರೆ ಈ ರೀತಿಯ ಸರ್ವಾಧಿಕಾರ ಕೇವಲ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕಾದ ಹೊಸ ಸಮಾಜದ ನಿರ್ಮಾಣಕ್ಕಾಗಿ ಮಾತ್ರವೇ ಹೊರತು ಯಾರನ್ನೂ ತುಳಿಯುವುದಕ್ಕಲ್ಲ ಎಂಬುದನ್ನು ಗಮನಿಸಬೇಕು. ಇದಲ್ಲದೆ ಇಲ್ಲಿ ಸರ್ವಾಧಿಕಾರ ಹೊಂದುವ ಬಹುಸಂಖ್ಯಾತ ಜನ ಅಲ್ಪ ಸಂಖ್ಯಾತರಾದ ಬಂಡವಾಳಶಾಹಿಗಳ ಮೇಲಿರುವರು. ಈ ರೀತಿ ಶ್ರಮಿಕವರ್ಗದ ಅಧಿಕಾರ ಇಡೀ ಬಡವರ ಬೆಂಬಲವನ್ನು ಪಡೆಯುತ್ತದೆ ಬಲಯುತವಾದ ಕಾರ್ಮಿಕ ಪಕ್ಷವನ್ನು ಕಟ್ಟಬೇಕೆಂದರೆ ಪ್ರಜಾಪ್ರಭುತ್ವದ ಕೇಂದ್ರೀಯ ತತ್ವಗಳನ್ನು

(6ನೇ ಪುಟ ನೋಡಿ)

ಾಥಾ

ಕೇಳುತ್ತಿದ್ದರು. ಎಲ್ಲ ಸಮಸ್ಯೆಗಳಿಗೂ
ಹೋರಾಟವೇದಾಗ ತಾವು ಹೋರಾಟ
ಂದಾಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಿ
ತಂಡದಲ್ಲಿ ಭಾಗವಹಿಸಿದ್ದವರು ಮನೆ
ಬ್ಬೊಬ್ಬರು ತೆರಳಿ ಕೊಟ್ಟಿದ್ದನ್ನು ತಿಂದು
ಡೆ ಕೂಡಿ ತಂಗಿ ಸಂಘಟನೆಯ ಭೂಮಿಕೆ
ಳಿಸುತ್ತಿದ್ದರು.

ಂಸ್ಕೃತಿಕ ಮಾಧ್ಯಮಗಳ ಮೂಲಕ ನಾವು
ಣ್ಮುಂದೆ ಅವರದೇ ಬದುಕನ್ನು ತೆರೆದಿಡು
ಕೆಲವರು ಕಣ್ಣೀರು ಹಾಕುತ್ತಿದ್ದರು.
ಬಿಗಿಯುತ್ತಿದ್ದರು. ಅಂತಹವರಿಗೆ
ದಿನ ಅಳುತೀರಿ, ಎಷ್ಟಂತ ಅಳುತೀರಿ.
ರಿದೂ, ನೀವು ಏನು ಸಾದಿಸ್ತೀರಿ

(6ನೇ ಪುಟ ನೋಡಿ)



ನಂಜನಗೂಡು ತಾಲ್ಲೂಕು ದಲಿತರು ಕಳೆದ ತಿಂಗಳಿಂದ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ನಿವೇಶನಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ.

ಚಿತ್ರ : S.C. ಚಂದ್ರಶೇಖರ್

ಅಂಬೇಡ್ಕರ್ ವಿಶ್ಲೇಷಣೆ

(ಮಧ್ಯದ ಪುಟದಿಂದ)

ಅನುಸರಿಸಲೇ ಬೇಕು. ಈ ರೀತಿ ಪ್ರಜಾಪ್ರಭುತ್ವ ಎಂದಾಗ ಯಾವಾಗಲೂ ತುಂಬ ಎತ್ತರದ ನಿಟ್ಟಿದ ತತ್ವಗಳ ಬಗ್ಗೆ ಯೋಚಿಸಬೇಕೇ ವಿನಃ ವರ್ಗಭೇದ ಇರುವ ಪ್ರಜಾಪ್ರತ್ವದಗಳನ್ನಲ್ಲ ಎಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಇದರಿಂದ ಕೆಲವೇ ಮಂದಿ ಭೂಮಾಲೀಕರ ಮತ್ತು ಬಂಡವಾಳಷಾಯಿಗಳ ಸ್ವೇಚ್ಛಾವೃತ್ತಿಯನ್ನು ಬಹು ಸಂಖ್ಯಾತ ಶ್ರಮಿಕ ವರ್ಗದ ಸ್ವತಂತ್ರತೆಯಿಂದ ಬದಲಾಯಿಸುವುದೆಂದರೆ, ಹಳೆಯ ಸಾಮಾಜಿಕ ವ್ಯವಸ್ಥೆಯಿಂದ ಹೊಸ ಸಮಾನತಾ ಸಮಾಜಿಕ ವ್ಯವಸ್ಥೆಗೆ ಬದಲಾಯಿಸುವುದು ಎಂದೇ ಅರ್ಥ. ಇದೇ ನಿಜವಾದ ಅರ್ಥದಲ್ಲಿ 'ಕಮ್ಯುನಿಸಂ'ನ ಮೊದಲನೆಯ ಮಜಲು.

ಈ ಎಲ್ಲ ಹಿನ್ನೆಲೆಯಲ್ಲಿ ರಾಷ್ಟ್ರದ ಕೆಲವು ಮುಖ್ಯ ಸಂಗತಿಗಳ ಕಡೆಗೆ ನಿಮ್ಮ ಗಮನ ಸೆಳೆಯಲು ಬಯಸುವೆ. ಅಂಬೇಡ್ಕರ್ ಅವರ ಪ್ರಕಾರವಾಗಿ ರಾಷ್ಟ್ರವೆಂಬುದು ನಿರ್ದಿಷ್ಟವಾದ ಕಾರ್ಯವ್ಯಾಪ್ತಿಯನ್ನು ಒಳಗೊಂಡಿರುವಂತಹುದು. ಹಾಗೂ ಇದು ತನ್ನ ಕಾರ್ಯವ್ಯಾಪ್ತಿ ಒಳಗೆ ಶ್ರಮಿಕವರ್ಗದ ಹಿತವನ್ನು ರಕ್ಷಿಸುವಂತಹುದೂ ಆಗಿದೆ. ಅದೇ ಸಮಯದಲ್ಲಿ ಇವರು ಈ ಹೊತ್ತಿನ ಅಸ್ತಿತ್ವದಲ್ಲಿ ಇರುವ ರಾಷ್ಟ್ರ ಎಂಬುದು ಭೂಮಾಲೀಕರ ಮತ್ತು ಬಂಡವಾಳಷಾಹಿಗಳ ಕೈಯಲ್ಲಿ ಇರುವುದು ಎಂಬುದನ್ನು ಒಪ್ಪಿಕೊಳ್ಳುವುದು. ಹೀಗೆ ಇದು ಶೋಷಿತರ ಹಿತ ರಕ್ಷಣೆಯನ್ನು ಗಮನಿಸದೆ ಶೋಷಕರ ಹಿತಾಶಕ್ತಿಯನ್ನು ಮಾತ್ರ ಗಮನಿಸುವಂತಹುದಾಗಿರುತ್ತದೆ. ಆದರಿಂದ ರಾಷ್ಟ್ರವೆಂಬುದು ಒಂದು ಮಹತ್ವ ಪೂರ್ಣವಾದ ಅಂಗವಾಗಿ ಶ್ರಮಿಕ ವರ್ಗದ ರಕ್ಷಣೆಯನ್ನು ಒದಗಿಸುವ ಬದಲು ಕೆಲವೇ ಮಂದಿ ಅಲ್ಪಸಂಖ್ಯಾತ ಶೋಷಿತರ ಹಿತರಕ್ಷಣೆಯನ್ನು ಮಾತ್ರ ಗಮನಿಸುವಂಥದ್ದಾಗಿದೆ. ಈ ರೀತಿಯ ಹೊತ್ತಿನ ರಾಷ್ಟ್ರದಲ್ಲಿ ಅದರ ಕಾರ್ಯವ್ಯಾಪ್ತಿಯ ಬಗೆಗೆ ಅನೇಕ ರೀತಿಯ ಆದರ್ಶಗಳನ್ನು ಇಟ್ಟುಕೊಳ್ಳುವುದು ಕೇವಲ ಆದರ್ಶದ ಮಾತಾಗಿಬಿಡಬಹುದು ಎಂಬ ಅನುಮಾನವನ್ನು ವ್ಯಕ್ತಮಾಡುವರು. ಅದಲ್ಲದೆ ಹೀಗೆ ಯೋಚಿಸುವಾಗ ರಾಷ್ಟದ ಈ ಹೊತ್ತಿನ ವರ್ಗ ವೈರುಧ್ಯಗಳ ಸ್ಥಿತಿಯನ್ನು ಅವರು ಸಂಪೂರ್ಣವಾಗಿ ಯೋಚಿಸಿದ್ದಾರೆ.

(ಮುಂದುವರೆಯುವುದು)

ಒಂದು ವಾರದ ಜಾಥಾ

(ಮಧ್ಯದ ಪುಟದಿಂದ)

ನಿಮ್ಮಣ್ಣ ತಮ್ಮಂದಿರು, ನಿಮ್ಮಕ್ಕ ತಂಗಿಯರು ದಲಿತ ಸಂಘವ ಸೇರಿ ಎತ್ತಪ್ಪೆ, ಕುಡುಗೋಲು' ಆದ್ದರಿಂದ ನೀವು ದಲಿತ ಸಂಘರ್ಷ ಸಮಿತಿ ಸೇರಿ ಸಮಾನತೆಗಾಗಿ ಹೋರಾಡಿ ಎಂದು ಕರೆಕೊಡುತ್ತಿದ್ದರು.

ಇಂಡಿಯಾದ ಆಳುವ ವರ್ಗ ಚುನಾವಣೆಯ ಜೂಜಿನ ಮೂಲಕ ಬಡ ಜನತೆಯನ್ನು ವಂಚಿಸುವ ವಿಧಗಳನ್ನು ವಿಷದ ಪಡಿಸಿ ಚುನಾವಣೆಯನ್ನು ಬಹಿಷ್ಕರಿಸಿ ಎಂದಾಗ ಆಶಾದಾಯಕ ಪ್ರತಿಕ್ರಿಯೆ ಕಂಡು ಬಂತು.

ಇಂಥ ಜಾತಾಗಳಿಂದ ದಲಿತರಲ್ಲಿ ರಾಜಕೀಯ, ಸಾಂಸ್ಕೃತಿಕ ಪ್ರಜ್ಞೆ ಮೂಡಿಸಿ ಹೋರಾಟಕ್ಕೆ ಸಿದ್ಧಗೊಳಿಸುವಲ್ಲಿ ಸಫಲವಾಗುತ್ತೇವೆ ಎನ್ನುವ ಆತ್ಮ ವಿಶ್ವಾಸ ಮೂಡಿತು.

ಗಂಗಾರಾಂ, ಹೆಚ್. ರಾಮಕೃಷ್ಣ

ಯಶಸ್ವಿಯಾದ 'ಚಂಡಗೋಡು ಹೋರಾಟ'ದ ಬಗ್ಗೆ

ಮಾನ್ಯರೇ,

ಕಳೆದ 'ಪಂಚಮ' ಸಂಚಿಕೆಯಲ್ಲಿ ಯಶಸ್ವಿಯಾದ 'ಚಂಡಗೋಡು ಹೋರಾಟ' ಓದಿದೆ. ದಿಟ್ಟ ಹೋರಾಟ ನಡೆಸಿ ಕೊನೆಗೂ 50 ಲಕ್ಷರೂ. ಬೆಲೆ ಬಾಳುವ ಭೂಮಿಯನ್ನು ಭೂಹೀನ ದಲಿತರಿಗೆ ದಕ್ಕಿಸಿಕೊಟ್ಟ ದ. ಸಂ. ಸ. ಚಿಕ್ಕಮಗಳೂರು ಶಾಖೆಯು ನಿಜಕ್ಕೂ ಮಾದರಿ ಹಾಕಿದೆ.

ಶೇ. 80 ರಷ್ಟು ದಲಿತ ಸಮುದಾಯ ಗ್ರಾಮಾಂತರ ಪ್ರದೇಶದಲ್ಲಿ ಬದುಕುತ್ತಿದ್ದು ಹಸಿವು, ಅಸ್ಪೃಶ್ಯತೆ, ಜಮೀನುದಾರರ ಪಿತೂರಿ, ಹಲ್ಲೆ, ಇತ್ಯಾದಿ ಎಲ್ಲ ಬಗೆಯ ಹಿಂಸೆಗೆ ಒಳಗಾಗಿದೆ. ಈ ಎಲ್ಲ ಹಿಂಸೆಯ ಮೂಲ ಇರುವುದು ನಮ್ಮ ಜಾತಿವಾದಿ ಜಮೀನುದಾರಿ-ಬಂಡವಾಳಶಾಹಿ ವ್ಯವಸ್ಥೆಯಲ್ಲಿ.

ವ್ಯಕ್ತಿಯೊಬ್ಬನ ಸ್ಥಾನಮಾನಗಳು ಆಸ್ತಿ, ಸಂಪತ್ತಿನ ಆಧಾರದ ಮೇಲೆ ನಿರ್ಣಯಿಸಲ್ಪಡುವಂಥ ಈ ಅನಿಷ್ಟ ವ್ಯವಸ್ಥೆಯಲ್ಲಿ ದಲಿತರ ಈ ಅವಮಾನಕರ ಬದುಕು ಅನಿವಾರ್ಯ. ಉತ್ಪಾದನಾ ಮಾಧ್ಯಮಗಳ ಮೇಲಿನ ಖಾಸಗಿ ಹಕ್ಕು ರದ್ದಾಗುವ ತನಕ ದಲಿತರ ಈ ಹೀನಾಯ ಬದುಕು ಬದಲಾಗುವುದಿಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಮುಖ್ಯ ಉತ್ಪಾದನಾ ಮಾಧ್ಯಮವಾದ ಭೂಮಿ ಉಳ್ಳವರಿಗೆ ಒಂದು ಶಕ್ತಿಯಾಗಿ ಪಾಳೆಯಗಾರಿಕೆಯನ್ನು ನೆಲೆಗೊಳಿಸುತ್ತಿದೆ. ಜಮೀನುದಾರರ ಕ್ರೌರ್ಯ ಅಧಿಕಗೊಳಿಸುವಲ್ಲಿ ಸಫಲವಾಗುತ್ತಿದೆ. ದಿನದಿನಕ್ಕೂ ಬರ್ಬರವಾಗುತ್ತಿರುವ ಭೂಹೀನ, ಬಡವರ ಬದುಕು ಬದಲಾಗಬೇಕಾದಲ್ಲಿ ಭೂಮಿಯೊಟ್ಟಿಗಿನ ಅವರ ಸಂಬಂಧಗಳು ಬದಲಾಗಬೇಕಿದೆ.

ಈ ಹಿಂದೆ ಇಂಥ ಬದಲಾವಣೆಗಾಗಿ ನಡೆದ ಭೂಹೀನರ ಹೋರಾಟಗಳು ತೀವ್ರಗೊಂಡಾಗ ಜಮೀನುದಾರಿ-ಬಂಡವಾಳಶಾಹಿ ಆಳುವ ವರ್ಗ ತನ್ನ ಉಳಿವಿಗಾಗಿ ಪೋಲೀಸು, ಮಿಲಿಟರಿ ಶಕ್ತಿಯಿಂದ ಇಂಥ ಹೋರಾಟಗಳನ್ನು ಹತ್ತಿಕ್ಕಿತು. ಜತೆಗೆ ಇಂಥ ಹೋರಾಟದ ತೀವ್ರತೆ ವ್ಯಾಪಕವಾಗುವುದನ್ನು ತಪ್ಪಿಸಲು ಭೂಮಿತಿ, ಬಗರ್ ಹುಕ್ಕುಂ, ಭೂಸುಧಾರಣೆ ಇತ್ಯಾದಿ ಸುಧಾರಣಾ ಕಾನೂನುಗಳನ್ನು ಜಾರಿಗೊಳಿಸಿ ಆ ಮೂಲಕ ಹೋರಾಟ ಪ್ರಜ್ಞೆಯನ್ನು ಅಳಿಸಿ ಗುಲಾಮೀಯ ಮನೋಭಾವ ಬೆಳೆಸಿತು.

ಪತ್ರಗಳು

ಈ ಕಾನೂನುಗಳು ಕನಿಷ್ಠ ಕಾರ್ಯರೂಪಕ್ಕೂ ಇಳಿಯದೆ ಹಾಳೆಗಳ ಮೇಲೆಯೇ ಉಳಿದವು. ಆಡಳಿತ ಯಂತ್ರ ಉಳ್ಳವರ ಗುಲಾಮಗಿರಿಯಲ್ಲಿದ್ದುದರಿಂದ ಈ ಕಾಯ್ದೆಗಳ ಬಹುಪಾಲು ಫಲಿತ ಜಮೀನುದಾರರ ಕೈಸೇರಿತು.

ದಲಿತರನ್ನು ಇಂದು ಸುಡುತ್ತಿರುವ ಸಮಸ್ಯೆಗಳಲ್ಲಿ ಅತ್ಯಂತ ಮುಖ್ಯವಾದದ್ದು ಭೂಮಿ ಸಮಸ್ಯೆ, ಭೂಹೀನತೆಯಿಂದಾಗಿ ಹಸಿವು, ಅಸ್ಪೃಶ್ಯತೆ, ಹಲ್ಲೆ, ಹಿಂಸೆ, ಸಾಮಾಜಿಕ ಬಹಿಷ್ಕಾರ ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತಿದೆ.

ಈಗ ದ. ಸಂ. ಸ. ಎಲ್ಲಾ ಜಾತಿಯ ಭೂಹೀನರನ್ನು ಸಂಘಟಿಸಿ ತಮ್ಮ ವಿಮೋಚನೆಗಾಗಿ ಹೋರಾಡಬೇಕಾಗಿದೆ.

ಚಂಡಗೋಡು ಹೋರಾಟ ಈ ದಿಕ್ಕಿನಲ್ಲಿ ಮಹತ್ವದ ಹೋರಾಟ. ಇದು ಇನ್ನುಳಿದ ದಲಿತರನ್ನು ತನ್ನ ಹೋರಾಟದ ಹಾದಿಗೆಳೆಯುವಲ್ಲಿ ಸಫಲವಾಗುತ್ತದೆ ಎಂಬ ನಂಬಿಕೆ ಇದೆ.

ಗೋಪಾಲಕೃಷ್ಣ,
ಬೆಂಗಳೂರು.

ಪತ್ರಗಳು

ಕುಡಿಯುವ ನೀರಿಗೆ ದಲಿತರ ಪರದಾಟ

ಮಾನ್ಯರೇ,

ಕೋಲಾರ ತಾಲ್ಲೂಕ ಹುತ್ತೂರು ಹೋಬಳಿ ಮಣಿಘಟ್ಟ 146 ಮನೆಗಳ ಒಂದು ಹಳ್ಳಿ. ಬಹುತೇಕ ಇಂದೋ ನಾಳೆ ಕುಸಿಯುವಂಥ 46 ಗುಡಿಸಿಲುಗಳಲ್ಲಿ ದಲಿತರು ಬದುಕು ತಳ್ಳುತ್ತಿದ್ದಾರೆ. ಕೂಲಿನಾಲಿಯಿಂದ ಹೊಟ್ಟೆ ಹೊರೆದುಕೊಳ್ಳುತ್ತಿರುವ ದಲಿತರಿಗೆ ಕಾಯಲೆ ಕಸಾಲೆಯಾದರೆ ಹತ್ತು ರೂಪಾಯಿಗೂ ಗತಿ ಇರದ ಸ್ಥಿತಿ ಇದೆ.

ಸರ್ಕಾರದ ದಲಿತೋದ್ಧಾರದ ಯೋಜನೆಗಳು ಇನ್ನೂ ಇತ್ತ ಸುಳಿದೇ ಇಲ್ಲ. ಇತ್ತೀಚೆಗೆ ದಲಿತರು ಸರ್ಕಾರಿ ಅಧಿಕಾರಿಗಳಿಗೆ ಲಂಚ ಕೊಟ್ಟು 22 ಮನೆಗಳನ್ನು ಮಂಜೂರು ಮಾಡಿಸಿಕೊಂಡರು. ದಲಿತರ ಏಳಿಗೆ ಸಹಿಸದ ಗ್ರೂಪ್ ಪಂಚಾಯಿತಿ ಛೇರ್‌ಮನ್ ವೆಂಕಟೇಶಪ್ಪ ಮಂಜೂರಿಯನ್ನು ಸರ್ಕಾರಕ್ಕೆ ವಾಪಸ್ ಮಾಡಿಸಿದ.

ಕುಡಿಯುವ ನೀರಿನ ವ್ಯವಸ್ಥೆ ಇಲ್ಲದ್ದರಿಂದ ದಲಿತರು ಅತ್ಯಂತ ಅಪಮಾನಕರ ಸ್ಥಿತಿಯಲ್ಲಿ ನೀರಿಗೆ ಪರದಾಡ ಬೇಕಿದೆ. ಸವರ್ಣೀಯರು ತರುವ ಬಾವಿಯಿಂದ ದಲಿತರು ನೀರು ಮೊಗೆದು ತರದಂತೆ ಅಡ್ಡಿ ಮಾಡಲಾಗುತ್ತಿದೆ. ಬಾವಿಯ ಬಳಿ ಕೊಡ ಇಟ್ಟು ಗಂಟೆಗಟ್ಟಲೆ ಕಾದು ಸವರ್ಣೀಯರಿಂದ ನೀರು ಉಯ್ಯಿಸಿಕೊಂಡು ತರಬೇಕಾಗಿದೆ.

ಒಮ್ಮೆ ಒಬ್ಬ ದಲಿತ ಮಹಿಳೆ ತುಂಬ ಹೊತ್ತು ಕಾದು ಯಾರೂ ಬಾರದ್ದರಿಂದ ನೀರು ಮೊಗೆದು ತರುವಷ್ಟು ಧೈರ್ಯ ಮಾಡಿಬಿಟ್ಟಳು. ವಿಷಯ ತಿಳಿದ ಸವರ್ಣೀಯರು ಅಡ್ಡಗಟ್ಟಿ ಥಳಿಸಿ ಹಲ್ಲೆ ಮಾಡಿದರು. ಇಂಥ ಬದುಕು ಎಲ್ಲಿಯವರೆಗೆ ? ನಾವು ಕೂಡ ಉಳಿದವರಂತೆ ಸಮನಾಗಿ ಬದುಕುವುದು ಎಂದು ? ಸರ್ಕಾರ ಇಂತಹ ಸ್ಥಿತಿ ನಿವಾರಿಸಲೆತ್ನಿಸುವುದೇ ಇಲ್ಲ ಯಾಕೆ ?

ಎಚ್. ಮುನಿವೆಂಕಟಪ್ಪ
ನಚಿಕೇತ ನಿಲಯ, ಕೋಲಾರ

ತಂಗಿ ಅನುಸೂಯ

ಕೋಟಿ ಕೋಟಿ ಬಾದೆಗಳಲ್ಲಿ
ಲಕ್ಷಾಂತರ ನೋವುಗಳಲ್ಲಿ
ನೀ ಹುಟ್ಟಿ ಬೆಳೆದೆಯಮ್ಮ
ನನ ತಂಗಿ ಅನುಸೂಯ ॥ಕೋಟಿ॥

ಊರೂರು ಬೇಲೀಲಿ
ನೂರಾರು ಬಳ್ಳೀಲಿ
ಕಿತ್ತೆಸೆದು ತುಳಿದಂಥ
ದಿನ ನಿತ್ಯ ಅಳುವಂಥ
ಕೋಟಿ ಕೋಟಿ ಹೂವುಗಳಲ್ಲಿ
ನೀನೊಂದು ಹೂವಮ್ಮ ॥ಕೋಟಿ॥

ಮಾಲೂರು ತಾಲ್ಲೂಕು
ಟೇಕಲ್ಲು ಹೋಬಳಿ
ಹುಣಸಿಕೋಟೆಯಲ್ಲಿ
ಬಡ ಕುಂಬಾರ್ರ ಮನೆಯಲ್ಲಿ
ನೀ ಹುಟ್ಟಿ ಬೆಳೆದು ಬಂದೆ
ನನ ತಂಗಿ ಅನುಸೂಯ ॥ಕೋಟಿ॥

ಮೋಸ ಕಪಟ ಅರಿಯದ ನಿನಗೆ
ಎಳೆತನದಿ ತಾಳಿ ಬಿಗಿಸಿ
ಗಂಡನ ಜತೆ ಕಳಿಸಿದರಮ್ಮ
ನನ ತಂಗಿ ಅನುಸೂಯ ॥ಕೋಟಿ॥

ವರ್ಷವೆರಡು ಕಳೆಯೂಲು
ಕಣ್ಣರದ ಯಮರಾಯ
ನಿನ ಕುಂಕುಮ ಬಳೆಯ ಕಿತ್ತಾನಮ್ಮ
ನನ ತಂಗಿ ಅನುಸೂಯ ॥ಕೋಟಿ॥

ಹದಿನೇಳು ವರ್ಷಕ್ಕೆ
ಮುತ್ತೈದೆ ಮಡದಿ ನೀ
ಹದಿನೆಂಟು ವರ್ಷಕ್ಕೆ
ದಿಕ್ಕಿಲ್ಲದ ವಿಧವೆಯಾಗಿ
ತವರಿಗೆ ನೀನು ಮರಳಿದೆಯಮ್ಮ
ನನ ತಂಗಿ ಅನುಸೂಯ ॥ಕೋಟಿ॥

ಹಸುಗೂಸು ತಬ್ಬಿಕೊಂಡು
ಗಂಡನ ನೆನೆ ನೆನೆದು
ಶೋಕವ ಮಾಡುತ್ತಿದ್ದೆಯಮ್ಮ
ನನ ತಂಗಿ ಅನುಸೂಯ ॥ಕೋಟಿ॥

ಆಗಷ್ಟು ಆರನೇ ದಿನ
ನಿನ ಬಾಳೀನ ದುರ್ದಿನ
ಹಟ್ಟ ಹಗಲು ಸೋಮವಾರ
ಮಟ ಮಟ ಮಧ್ಯಾಹ್ನ
ನೀ ಸೀಬೆ ತೋಪು ಕಾಯುತಿದ್ದೆ
ನನ ತಂಗಿ ಅನುಸೂಯ ॥ಕೋಟಿ॥

ನಿಮ್ಮೂರ ಕೃಷ್ಣೆಗೌಡ
ವೆಂಕಟೇಶ ನಂಜುಂಡ
ದುಷ್ಟ ಕೂಟ ಕಟ್ಟಿ ಕೊಂಡು
ನಿನ್ನ ದಾರಿ ಕಂಡು ಕೊಂಡು
ಸೀಬೆ ತೋಪು ಮುತ್ತಿದರಮ್ಮ
ನನ ತಂಗಿ ಅನುಸೂಯ ॥ಕೋಟಿ॥

ಒಬ್ಬಂಟಿ ನಿನ್ನನ್ನು
ಸುತ್ತುವರಿದ ನಾಯಿಗಳು
ಕೈ ಮುಗಿದು ಬೇಡಿದರೂ
ಕಣ್ಣೀರು ಸುರಿಸಿದರೂ
ದುಷ್ಕರ ಎದೆಯು ಕರಗಲಿಲ್ಲ
ನನ ತಂಗಿ ಅನುಸೂಯ ॥ಕೋಟಿ॥

ಕಾಮುಖರು ಎಲ್ಲ ಕೂಡಿ
ಒಂದಾಗಿ ಮೇಲೆ ಬಿದ್ದು
ದರ ದರನೆ ಎಳೆದಾಡಿ
ಸೀರೆ ರವಿಕೆ ಹರಿದ್ಹಾಕಿ
ನಿನ ಶೀಲವ ಕೆಡಿಸಿ ಹೋದರಮ್ಮ
ನನ ತಂಗಿ ಅನುಸೂಯ ॥ಕೋಟಿ॥

ನಿನಗಾದ ಅನ್ಯಾಯ
ನಮ್ಮೆದೆಗೆ ಚೂರಿ ಇರಿತ
ಗಾಯವ ಮರೆತು ಬದುಕಲಾರೆವು
ನನ ತಂಗಿ ಅನುಸೂಯ ॥ಕೋಟಿ॥

ರಚನೆ : ದಲಿತ ಕಲಾ ಮಂಡಳಿ, ಕೋಲಾರ

ತಾತಗುಣಿ ಕಾರ್ಮಿಕರ 'ಬೆಂಗಳೂರು ಚಲೋ'

(ಮೊದಲನೇ ಪುಟದಿಂದ)

ಕಾರಣ 11 ಜನ ದಲಿತ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲಾಯಿತು. ಪುನಃ ಕಾರ್ಮಿಕರು ತಮ್ಮ ಬೇಡಿಕೆಗಳಾದ, ಕನಿಷ್ಟಕೂಲಿ ಜಾರಿ, ವಜಾಮಾಡಲ್ಪಟ್ಟ ಕಾರ್ಮಿಕರನ್ನ ಪುನರ್ ನೇಮಕ, ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜಾದ ಸೌಲಭ್ಯ ಮತ್ತು ಸರ್ಕಾರ ಎಸ್ಟೇಟನ್ನು ಪ್ಲಾಂಟೇಷನ್ ಕಾಯಿದೆಗೆ ಸೇರಿಸಿಕೊಳ್ಳುವುದು ಮುಂತಾದ ಬೇಡಿಕೆಗಳನ್ನಿಟ್ಟು ಕಾರ್ಮಿಕರು ಸರ್ಕಾರಕ್ಕೆ ಹಲವಾರು ಸಾರಿ ಮನವಿಯನ್ನು ಸಲ್ಲಿಸುತ್ತಾ ಬಂದರೂ ಸರ್ಕಾರವು ಈ ತನಕ ಯಾವುದೇ ತರಹನಾದ ಕ್ರಮವನ್ನು ಕೈಗೊಂಡಿಲ್ಲ. "ಹರಿಜನರ ಉದ್ಧಾರವನ್ನು ಪೇಪರಿನಲ್ಲಿ ರೇಡಿಯೋದಲ್ಲಿ ಮಾತ್ರ ಹೇಳಿಕೊಂಡು ಜನರನ್ನು ವಂಚಿಸುತ್ತಿರುವಂತಹ ಸರ್ಕಾರ ಕ್ರಿಯೆಯಲ್ಲಿ ಸೋತಿದೆ" ಮತ್ತು ಸರ್ಕಾರ ಇರುವುದು ರೋರಿಚ್‌ರಂತಹ ಭೂಮಾಲೀಕರುಗಳ ರಕ್ಷಣೆಗೆಂದು ತೋರ್ಪಡಿಸಿಕೊಂಡಿದೆ.

ದಲಿತ ಕಾರ್ಮಿಕರು ಸುಮಾರು 120 ದಿನಗಳಿಂದ ಎಸ್ಟೇಟ್‌ನ ಬಾಗಿಲ ಮುಂದೆ ತಮ್ಮ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿದ್ದರು. ಇಲ್ಲಿಯವರೆವಿಗೂ ಯಾವ ಪ್ರತಿಕ್ರಿಯೆ ಮಾಲೀಕರಿಂದಾಗಲಿ ಅಥವ ನಮ್ಮ ಘನ ಸರ್ಕಾರದಿಂದಾಗಲಿ ಬಂದಿಲ್ಲ. ಅದರ ಬದಲು ಈ ಕಾರ್ಮಿಕರು ಮಾಡುತ್ತಿರುವ ಹೋರಾಟವನ್ನು ಹತ್ತಿಕ್ಕಲು ಮಾಲೀಕರೊಟ್ಟಿಗೆ ಸರ್ಕಾರವು ಕೂಡ ಬೆಂಬಲಿಸಿದೆ.

ಬೇರೆ ದಾರಿ ಕಾಣದ ಕಾರ್ಮಿಕರು "ನಮಗೆ ಒಂದೇ ದಾರಿ, ಅದು ಹೋರಾಟದ ದಾರಿ" ಎಂಬುದನ್ನು ಮನಗೊಂಡು ಡಿ. 5ನೇ ತಾರೀಖಿನಂದು ಬೆಂಗಳೂರು ಚಲೋ ಚಳುವಳಿಯನ್ನು ನಡೆಸಿದರು.

ಕಾರ್ಮಿಕರು ಸುಮಾರು 15 ಮೈಲಿ ಇರುವ ಎಸ್ಟೇಟ್‌ನಿಂದ ಬೆಂಗಳೂರು ನಗರಕ್ಕೆ ಕುಟುಂಬ ಸಮೇತರಾಗಿ ಕಾಲ್ನಡಿಗೆಯಲ್ಲಿ ಬಂದು ಜಿಲಾ ಕಛೇರಿಯ ಮುಂದೆ ತಮಗೆ ಸರಿಯಾದ ನ್ಯಾಯ ದೊರೆಯುವವರೆಗೂ ಧರಣಿ ಮುಷ್ಕರ ನಡೆಸಲು ತೀರ್ಮಾನಿಸಿದ್ದು ಅದರಂತೆ ಮೆರವಣಿಗೆ ಹೊರಟಿತ್ತು. ಆದರೆ ಮಧ್ಯೆ ಪೋಲೀಸರು ಪ್ರವೇಶ ಮಾಡಿ ಮೆರವಣಿಗೆಯನ್ನು ತಡೆದು ನಿಷೇದಾಜ್ಞೆ ಇರುವುದರಿಂದ ಮೆರವಣಿಗೆ ನಿಲ್ಲಿಸಬೇಕೆಂದು ತಡೆದರು. ಮತ್ತು ಬೆದರಿಕೆ ಹಾಕಿದರು. ಯಾವುದಕ್ಕೂ ಜಗ್ಗದ ಕಾರ್ಮಿಕರು ಸರ್ಕಾರ ಮತ್ತು ಪೋಲೀಸರ ನೀತಿಯ ಬಗ್ಗೆ ಘೋಷಣೆಗಳನ್ನು ಹಾಕುತ್ತ ಹೋರಾಟದಲ್ಲಿ ಮುನ್ನುಗ್ಗಿದರು.

ಈ ಮೆರವಣಿಗೆಯು ನಗರದ ಜಿಲ್ಲಾ ಕಛೇರಿಯ ಹತ್ತಿರ ಬರಲು ಬಿಡದೆ ಪೋಲೀಸರು ತಡೆದರು. ಆದ್ದರಿಂದ ಕಾರ್ಮಿಕರು ಈಗ ವಿಧಾನ ಸೌದದ ಮುಂದೆ ಧರಣಿ ಮುಷ್ಕರ ಮಾಡುತ್ತಿದ್ದಾರೆ. ರಾತ್ರಿ ಗಡಗಡ ನಡುಗಿಸುವ ಚಳಿಯಲ್ಲಿ ಮುದುರಿ ಮುದ್ದೆಯಾಗಿ ರಾತ್ರಿಗಳನ್ನು ಕಳೆಯುತ್ತಿದ್ದಾರೆ. ಇವರ ಕಷ್ಟ ಕೇಳುವವರಾರು?

ಈ ಕಾರ್ಮಿಕರ ನ್ಯಾಯಯುತವಾದ ಹೋರಾಟವು ದ.ಸಂ.ಸ.ಯ ಗಮನಕ್ಕೆ ಬಂದು ಸರ್ಕಾರ ಈ ಧೋರಣೆಯನ್ನು ತೀವ್ರವಾಗಿ ಖಂಡಿಸಿ ಕಾರ್ಮಿಕರ ಕಾರ್ಯಕ್ರಮದ ಮತ್ತು ಧರಣಿ ಮುಷ್ಕರದಲ್ಲಿ ಭಾಗವಹಿಸುವಂತೆ ತೀರ್ಮಾನಿಸಿದೆ. ಮತ್ತು ಈ ಹರಿಜನ ಕಾರ್ಮಿಕರ ನ್ಯಾಯವಾದ ಬೇಡಿಕೆಗಳನ್ನು ಸರ್ಕಾರ ಬೇಗನೇ ಈಡೇರಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತದೆ.

ಮಹಿಳೆಯ ಮೇಲೆ ಅತ್ಯಾಚಾರ : ದಲಿತರ ಪ್ರತಿಭಟನೆ

(ಮೊದಲನೇ ಪುಟದಿಂದ)

ಕೃಷ್ಣೇಗೌಡ ತಾಲ್ಲೂಕಿನ ಬಲಿಷ್ಠ ಭೂಮಾಲಿಕನಾಗಿದ್ದು ಆಳುವ ಪಕ್ಷದ ವಕ್ತಾರನೆಂದು ಮೆರೆಯುತ್ತಿರುವ ಇವನ ದಲಿತ ವಿರೋದಿ ಕೃತ್ಯಗಳು ಅನೇಕ. ಪೋಲೀಸು ಮತ್ತು ರೆವಿನ್ಯೂ ಅಧಿಕಾರಿಗಳ ಬೆಂಬಲದಿಂದ ಈ ಪ್ರದೇಶದ ಬಡ ಜನತೆಯನ್ನು ತನ್ನ ಪಾಳೆಯಗಾರಿಕೆಯ ಅಂಕೆಯಲ್ಲಿಟ್ಟುಕೊಂಡಿದ್ದಾನೆ. ಇವನ ಹಿಂಸೆ ತಾಳಲಾರದ ಬಡವರಿಂದ ಮಾಸ್ತಿ ಪೋಲೀಸು ಠಾಣೆಗೆ ಕೊಡಲಾದ ಹತ್ತಾರು ದೂರುಗಳಲ್ಲಿ ಒಂದೂ ತನಿಖೆಯಾಗಿಲ್ಲ.

ಇತ್ತೀಚೆಗೆ ಜಮೀನು ವಿವಾದವೊಂದರ ದ್ವೇಷದಿಂದ ಹುಣಸಿಕೋಟೆ ಬಡಕುಂಬಾರ ಶೇಷಗಿರಿಯಪ್ಪನ ಮಗಳಾದ ಅನುಸೂಯಮ್ಮ ಎಂಬ ಒಂದು ಮಗುವಿನ ವಿಧವೆ ತಾಯಿಯ ಮೇಲೆ ತಮ್ಮಂದಿರೊಂದಿಗೆ ಕೂಡಿ ಅತ್ಯಾಚಾರ ಎಸಗಿದ್ದಾನೆ.

ದೀಪಾವಳಿ ಮಾರನೆ ದಿನ ಒಂಟಿಯಾಗಿ ಸೀಬೆ ತೋಪು ಕಾಯುತಿದ್ದ ಅನುಸೂಯಮ್ಮನನ್ನು ಕೃಷ್ಣೇಗೌಡ, ನಂಜುಂಡ, ವೆಂಕಟೇಶ ಮತ್ತವನ ಕೂಟ ಕೂಡಿ ಸೀಬೆ ತೋಪು ಮುತ್ತಿ ಮೈ ಮೇಲೆ ಅರೆ ಕಾಸಿನಗಲದ ಬಟ್ಟೆಯನ್ನು ಬಿಡದೆ ಕಿತ್ತೆಸೆದು ಸಾಮೂಹಿಕ ಅತ್ಯಾಚಾರ ಮಾಡಿರುವರು. ಮೈಪೋರೆಯನ್ನೆಲ್ಲಾ ಕಚ್ಚಿ, ಪರಚಿ ಗಾಯಗೊಳಿಸಿದ್ದಲ್ಲದೆ ಮೂತ್ರ ವಿಸರ್ಜಿಸಿ ಹೊರಟು ಹೋಗಿದ್ದಾರೆ.

ಪ್ರಜ್ಞಾಹೀನಗಳಾಗಿದ್ದ ಅನುಸೂಯಮ್ಮನನ್ನು ಕೋಲಾರದ ಎಸ್.ಎನ್.ಆರ್. ಆಸ್ಪತ್ರೆಗೆ ಸೇರಿಸಲಾಯಿತು. ಕೃಷ್ಣೇಗೌಡ ಅಲ್ಲಿಯೂ ಬಂದು ತನ್ನ ಪ್ರಭಾವ ಬೀರಿ ಆಸ್ಪತ್ರೆಯಿಂದ ಹೊರ ಹಾಕಿಸಿದ. ಪ್ರಭಾವಕ್ಕೊಳಗಾದ ವೈದ್ಯರು ಅತ್ಯಾಚಾರವೇನೂ ನಡೆದಿಲ್ಲವೆನ್ನುವ, ಗಾಯಗಳು ತೀರಾ ಸಾಮಾನ್ಯ ಎನ್ನುವ ಸರ್ಟಿಫಿಕೇಟು ನೀಡಿದ್ದಾರೆ. ದೂರು ದಾಖಲೆ ಮಾಡಿಕೊಂಡ ಮಾಸ್ತಿ ಪೋಲೀಸು ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕೃಷ್ಣೇಗೌಡನ ಹೆಸರನ್ನು ಅಪರಾದಿ ಸ್ಥಾನದಿಂದ ಮಾಯ ಮಾಡಿಸಿದ್ದಾರೆ. ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ.

ನಂತರ ಪುರಸಭೆಯ ವೃತ್ತದ ಬಳಿ ನಡೆದ ಬಹಿರಂಗ ಉದ್ಘಾಟನಾ ಸಮಾರಂಭವನ್ನು ಕೃಷ್ಣೇಗೌಡನಿಂದ ಅತ್ಯಾಚಾರಕ್ಕೊಳಗಾದ ಅನುಸೂಯಮ್ಮನವರು ಉದ್ಘಾಟಿಸಿದರು. ಕೃಷ್ಣೇಗೌಡನ ಈ ನೀಚ ಕೃತ್ಯವನ್ನು ಖಂಡಿಸಿ ಎಸ್. ವೆಂಕಟೇಶ್, ಕೆ. ರಾಮಯ್ಯ, ಶ್ರೀಕಾಂತ್ ಮಾತನಾಡಿದರು. ದಲಿತ ಕಲಾ ಮಂಡಳಿಯಿಂದ ಅನುಸೂಯಮ್ಮನವರನ್ನು ಕುರಿತಾದ ಹಾಡುಗಳ ಕಾರ್ಯಕ್ರಮವಿತ್ತು.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು, ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ, ಬೆಂಗಳೂರು-560 002.